ದಿನಾಂಕ 07.07.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಶ್ರೀ ಎನ್.ಆರ್.ಕೆ. 6ನೇ ಪ್ರತಿವಾದಿ ಪರ ವಕೀಲರಿಂದಃ

ಈ ದಾವೆಯನ್ನು ನಮ್ಮ ತಂದೆಯವರ ಅವರ ಜೀವಿತ ಕಾಲದಲ್ಲಿ ದಾಖಲಿಸಿರುತ್ತಾರೆ. ನಿಮ್ಮ ತಂದೆಯವರು ಯಾವ ಪರಿಹಾರ ಕೋರಿ ದಾವೆ ದಾಖಲಿಸಿದ್ದಾರೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿಯು ನಮ್ಮ ತಂದೆ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಲುವಾಗಿ ದಾಖಲಿಸಿರುತ್ತಾರೆ. ದಾವಾ ಸ್ವತ್ತು ಈ ಪೂರ್ವದಲ್ಲಿ ಸರ್ವೆ ನಂಬರ್ 148/1 ಇದ್ದು, ಈಗ ಪೋಡಾಗಿ ಸರ್ವೆ ನಂಬರ್ 148/5 ಆಗಿರುತ್ತದೆ. ದಾವಾ ಸ್ವತ್ತು ಲೇಟ್ ಬಾಲಕೃಷ್ಣ ರವರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ಭೂ ನ್ಯಾಯ ಮಂಡಳಿಯ ಆದೇಶದ ಮೇರೆಗೆ ದಾವಾ ಸ್ವತ್ತಿನ ಖಾತೆ ವಗೈರೆ ಲೇಟ್ ಬಾಲಕೃಷ್ಣ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಬಾಲಕೃಷ್ಣರವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅಸಲಿಗೆ ಬಾಲಕೃಷ್ಣರವರು ದಿನಾಂಕ 01.12.2004 ರಂದು ಮರಣ ಹೊಂದಿದ್ದು ಆದರೆ ಮರಣ ಪ್ರಮಾಣ ಪತ್ರದಲ್ಲಿ ದಿನಾಂಕ ದಿನಾಂಕ 14.04.2005 ಎಂದು ನಮೂದಾಗಿರುತ್ತದೆ. ಲೇಟ್ ಬಾಲಕೃಷ್ಣ ಮತ್ತು ಪ್ರತಿವಾದಿ 1 ರವರಿಗೆ ಪ್ರತಿವಾದಿ 2 ರಿಂದ 5 ರವರೆಗಿನ 4 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಸದರಿ ಬಾಲಕೃಷ್ಣರವರಿಗೆ ಪ್ರತಿವಾದಿ 1 ರಿಂದ 5 ರವರು ಮಾತ್ರ ವಾರಸುದಾರರಾಗಿರುತ್ತಾರೆ ಎಂದರೆ ಸರಿ.

ಈ ದಾವೆಯ ಕ್ರಯದ ಕರಾರಿನ ಬಗ್ಗೆ ತಮಗೆ ವೈಯಕ್ತಿಕ ಮಾಹಿತಿ ಇರುತ್ತದೆಯೇ ಎಂದರೆ ಸಾಕ್ಷಿಯು ಇರುತ್ತದೆ ಕ್ರಯದ ಕರಾರು ಮಾಡುವ ದಿನ ನಮ್ಮ ತಂದೆ ಮತ್ತು ಚಿಕ್ಕಪ್ಪನವರೊಂದಿಗೆ ನಾನು ಸಹ ಹಾಜರಿರುತ್ತೇನೆ. ನಿಪಿ-2ರ ಕ್ರಯದ ಕರಾರನ್ನು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಬರೆಯಲಾಯಿತು. ಕ್ರಯದ ಕರಾರನ್ನು ಬರೆಯುವ 3-4 ದಿನಗಳ ಹಿಂದೆ ಈ ವಿಚಾರವಾಗಿ ಮಾತುಕತೆ ನಡೆದಿರುತ್ತದೆ. ಕ್ರಯದ ಕರಾರನ್ನು ಬರೆದುಕೊಡುವ ವಿಚಾರದಲ್ಲಿ ಕ್ರಯದ ಕರಾರಿನ 3-4 ದಿನಗಳ ಹಿಂದೆ ಊರಿನ 12 ಯಜಮಾನರುಗಳು ಸೇರಿ ಮಾತುಕತೆ ನಡೆಸಿರುತ್ತಾರೆ ಅವರುಗಳ ಪೈಕಿ 4 ಜನ ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆ. ಈ ವಿಚಾರವನ್ನು ನನ್ನ ದಾವಾ ಪತ್ರದಲ್ಲಿ ಬರೆಯಿಸಿರುತ್ತೇನೆ ಆದರೆ ಅವರುಗಳ ಹೆಸರುಗಳನ್ನು ಬರೆಸಿರುವುದಿಲ್ಲ. ಸದರಿ ಯಜಮಾನರುಗಳ ಹೆಸರುಗಳನ್ನು ನನ್ನ ದಾವಾ ಪತ್ರದಲ್ಲಿ ನಮೂದಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-2ರ ಕ್ರಯದ ಕರಾರಿಗೆ ನಾನು ಸಹಿ ಮಾಡಿರುವುದಿಲ್ಲ. ನಿಪಿ-2ರ ಕ್ರಯಪತ್ರವನ್ನು ಬರೆಯಿಸಲು ಊರಿನ ಮುಖಂಡರು ಮಾಹಿತಿ ನೀಡಿರುತ್ತಾರೆ. ನಿಪಿ-2ರ ಕ್ರಯಪತ್ರಗಳನ್ನು ಬರೆಯಿಸಲು ನಮ್ಮ ತಂದೆ ಮತ್ತು ಚಿಕ್ಕಪ್ಪ ಬಾಲಕೃಷ್ಣರವರುಗಳು ನಮ್ಮ ತಂದೆಯ ಹೆಸರಿನಲ್ಲಿ ಛಾಪಾಕಾಗದಗಳನ್ನು ತಂದಿರುತ್ತಾರೆ. ರೂ. 30,000/- ನ್ನು ಕ್ರಯದ ಮೊಬಲಿಗಾಗಿ ಊರಿನ ಮುಖಂಡರು ನಿಗದಿಪಡಿಸಿರುತ್ತಾರೆ. ಕ್ರಯದ ಕರಾರನ್ನು ಬರೆಯಿಸಿಕೊಟ್ಟ ದಿನವೇ ನಿಮಗೆ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಒಟ್ಟಾರೆ ರೂ. 30,000/-ಗಳನ್ನು ನೀಡುವುದು ಕಷ್ಟವಾದ್ದರಿಂದ ಕ್ರಯದ ಕರಾರನ್ನು ಬರೆಯಿಸಿಕೊಂಡಿರುವುದಿಲ್ಲ. ಕ್ರಯದ ಮೊಬಲಗಾದ ರೂ. 30,000/- ಗಳನ್ನು ಕ್ರಯದ ಕರಾರನ್ನು ಬರೆಯಿಸಿಕೊಂಡ ದಿನದಂದು ಊರಿನ ಯಜಮಾನರುಗಳ ಮುಂದೆ ನೀಡಿರುತ್ತೇವೆ. ಆ ದಿನ ಯಜಮಾನರುಗಳಾದ ಶಿವನಂಜಪ್ಪ, ಗುರುನಂಜಶೆಟ್ಟಿ, ರಾಜು, ಶಿವರಾಮು,

ವೆಂಕಟರಮಣ, ಸಿದ್ದಶೆಟ್ಟಿ, ಗುರುನಂಜಶೆಟ್ಟಿ ರವರುಗಳು ಹಾಜರಿದ್ದು ಉಳಿದವರುಗಳ ಹೆಸರುಗಳನ್ನು ನಾನು ಮರೆತಿರುತ್ತೇನೆ. ಕ್ರಯದ ಕರಾರಿನಲ್ಲಿ ಕ್ರಯಪತ್ರವನ್ನು ಬರೆಯಿಸಿಕೊಳ್ಳಲು ಪ್ರತಿವಾದಿಗಳು ನಮ್ಮ ಸಂಬಂಧಿಕರಾದ ಕಾರಣದಿಂದ ಯಾವುದೇ ದಿನಾಂಕವನ್ನು ನಿಗದಿಪಡಿಸಿರಲಿಲ್ಲ. ಕ್ರಯದ ಕರಾರಿನ ಪೂರ್ವದ 3-4 ದಿನಗಳ ಹಿಂದೆ ನಡೆದ ಮಾತುಕತೆಯಲ್ಲಿ ಯಾವುದೇ ಷರತ್ತುಗಳನ್ನು ನಿಗದಿಪಡಿಸಿರುವುದಿಲ್ಲ. ನಿಪಿ-2ರ ಕ್ರಯದ ಕರಾರನ್ನು ದಿನಾಂಕ 28.04.2004 ರಂದು ಮಧ್ಯಾಹ್ನ 1.00 ಗಂಟೆಯಿಂದ 1.30 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ಆ ಸಮಯದಲ್ಲಿ ಪತ್ರ ಬರಹಗಾರರೊಂದಿಗೆ ನಾನು, ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪ ಬಾಲಕೃಷ್ಣರವರುಗಳು ಹಾಜರಿದ್ದರು. ನಿಪಿ-2ರ ಕ್ರಯದ ಕರಾರಿನಲ್ಲಿರುವ ಸಾಕ್ಷಿಗಳು ನಮ್ಮ ಗ್ರಾಮದಲ್ಲಿ ದಿನಾಂಕ 28.04.2004 ರಂದು ನಾವುಗಳು ಕ್ರಯದ ಕರಾರನ್ನು ಬರೆಯಿಸಿಕೊಂಡು ಸಂಜೆ ವಾಪಸ್ಸು ಊರಿಗೆ ಹೋದ ನಂತರ ನಮ್ಮ ಗ್ರಾಮದ ದೊಡ್ಡಮ್ಮತಾಯಿ ದೇವಾಲಯದಲ್ಲಿ ಸಹಿ ಮಾಡಿರುತ್ತಾರೆ. ನಮ್ಮ ಗ್ರಾಮ ಉಪ್ಪಲಗೇರಿ ಮೋಳೆ, ಕೊಳ್ಳೇಗಾಲ ಪಟ್ಟಣಕ್ಕೆ ಸೇರಿರುತ್ತದೆ. ಸಾಕ್ಷಿದಾರರುಗಳಾದ ಶಿವನಂಜಪ್ಪರವರ ತಂದೆಯ ಹೆಸರು ಜವರಾಯಶೆಟ್ಟಿ , ಶಿವರಾಮುರವರ ತಂದೆಯ ಹೆಸರು ಮುಳ್ಳೂರ ಸಿದ್ದಶೆಟ್ಟಿ, ರಾಚಶೆಟ್ಟಿ ರವರ ತಂದೆಯ ಹೆಸರು ರಾಚಶೆಟ್ಟಿ, ಎಂ. ರಾಜು ರವರು ತಂದೆಯ ಹೆಸರು ಮಹದೇವಶೆಟ್ಟಿ ಎಂದು ಆಗಿರುತ್ತದೆ.

ಕ್ರಯದ ಕರಾರಿನ ಪತ್ರ ಬರಹಗಾರರು ನನಗೆ ವೈಯಕ್ತಿಕರಾಗಿ ಪರಿಚಯವಿಲ್ಲ ಅವರ ಹೆಸರು ನಂಜುಂಡಶೆಟ್ಟಿ ಇರಬಹುದು. ಪತ್ರ ಬರಹಗಾರರು ಕ್ರಯದ ಕರಾರನ್ನು ಬರೆದು ನಮ್ಮ ತಂದೆಯವರ ಕೈಗೆ ನೀಡಿರುತ್ತಾರೆ. ನಮ್ಮ ಕ್ರಯದ ಕರಾರಿನಲ್ಲಿ ಸದರಿ ಬಾಲಕೃಷ್ಣರವರು ದಾವಾ ಸ್ವತ್ತಿನ ಸ್ವಾಧೀನವನ್ನು ನಮಗೆ ನೀಡಿರುತ್ತಾರೆ ಎಂದು ನಮೂದಾಗಿದ್ದು ಸದರಿ ವಿಷಯವನ್ನು ನಾವು ನಮ್ಮ ದಾವೆಯಲ್ಲಿ ನಮೂದಿಸಿರುತ್ತೇವೆ. ದಾವಾ ಸ್ವತ್ತು ನಮ್ಮ ಸ್ವಾಧೀನಾನುಭವದಲ್ಲಿತ್ತು ಎಂದು ತೋರಿಸಲು ಪಹಣಿ ಪತ್ರಗಳನ್ನು ನೀಡಿರುತ್ತೇನೆ. ಈ ದಾವೆಯಲ್ಲಿ ನಾವು ಸಲ್ಲಿಸಿರುವ ಯಾವುದೇ ಕಂದಾಯ ದಾಖಲೆಗಳಲ್ಲಿ ನಾವು ಸ್ವಾಧೀನದಲ್ಲಿರುತ್ತೇವೆ ಎಂದು ನಮೂದಾಗಿಲ್ಲ. ಬಾಲಕೃಷ್ಣರವರ ಜೀವಿತಕಾಲದಲ್ಲಾಗಲೀ ಹಾಗೂ ಅವರ ಮರಣ ನಂತರ ಪ್ರತಿವಾದಿಗಳಿಗಾಗಲೀ ನಾವು ನೋಟೀಸ್ ನೀಡಿಲ್ಲ. ಕ್ರಯದ ಕರಾರಿನ ನಂತರ ನಾವು ನಮ್ಮ ಚಿಕ್ಕಪ್ಪ ಮರಣ ಹೊಂದಿ 3-4 ತಿಂಗಳ ನಂತರ ಕ್ರಯಪತ್ರವನ್ನು ಬರೆದುಕೊಡುವಂತೆ ಪ್ರತಿವಾದಿಗಳನ್ನು ಕೇಳಿರುತ್ತೇವೆ. ನಾವು ಕೇಳುವ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ ಮತ್ತು ನಾವು ನಿಖರವಾಗಿ ಯಾವ ದಿನಾಂಕದಂದು ಕೇಳಿರುತ್ತೇವೆ ಎಂದು ನೆನಪಿಲ್ಲ. ಪ್ರತಿವಾದಿಗಳಿಗೆ ಲಿಖಿತವಾಗಿ ನೋಟೀಸ್ ನೀಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ.

ಈ ಹಂತದಲ್ಲಿ 6ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

–

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ